ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

ಸಿ.ಸಿ. ಸಂಃ **684/2024**

| | | |
|---|---|---|
| ಸಾಕ್ಷಿಯ ಹೆಸರುಃ | ರಾಜೇಶ | DW-1 |
| ತಂದೆಯ ಹೆಸರುಃ | ರಾಮಕೃಷ್ಣ | |
| ವಯಸ್ಸುಃ | 42 ವರ್ಷ | ಪ್ರಮಾಣೀಕರಿಸಿದ ದಿಃ 09.01.2026 |
| ಉದ್ಯೋಗಃ | ವ್ಯಾಪಾರ | |
| ವಾಸ ಸ್ಥಳಃ | ಮಂಗಳೂರು | |

ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ

1. ನಾನು ಹಾಗೂ ನನ್ನ ಸ್ನೇಹಿತ ವೆಂಕಟೇಶ ರವರು ಆರ್.ವಿ ಎಂಟರ್ ಪ್ರೈಸಸ್ ಎಂಬ ಸಂಸ್ಥೆಯನ್ನು ನಡೆಸಿಕೊಂಡು ಬರುತ್ತಿದ್ದೆವು. ದಿಃ 17.01.2022 ರಂದು ನನ್ನ ಮತ್ತು ಅವರ ಪಾರ್ಟನರ್ ಶೀಪ್ ಅಂತ್ಯವಾಗಿರುತ್ತದೆ.
2. ನಂತರ ನಾನು ಹಾಗೂ ನನ್ನ ಪತ್ನಿ ಪಾರ್ಟನರ್ ಆಗಿ ನಡೆಸಿಕೊಂಡು ಹೋಗುತ್ತಿದ್ದೇವೆ.
3. ಆಗ ವೆಂಕಟೇಶ ರವರ ತಾಯಿಯಾದ ಶ್ರೀಮತಿ ಸಿ. ರವರು ನನಗೆ 2017 ರಲ್ಲಿ 9 ಲಕ್ಷ ಹಣವನ್ನು ಸಾಲವಾಗಿ ನೀಡಿದ್ದರು. ಅದರ ಭದ್ರತೆಗಾಗಿ ನನ್ನ ಬಳಿ ಅವರು ನಿಪಿ - 1ರ ಖಾಲಿ ಚೆಕ್ಕನ್ನು ಪಡೆದಿರುತ್ತಾರೆ. ಸದರಿ ಚೆಕ್ ನನ್ನ ಹಾಗೂ ನನ್ನ ತಮ್ಮ ಜಂಟಿ ಖಾತೆಗೆ ಸಂಬಂಧಿಸಿರುತ್ತದೆ.
4. ಸದರಿ ಸಾಲವನ್ನು ನಾನು ದಿಃ 26.06.2020 ರಲ್ಲಿ ಸುಬ್ರಮಣ್ಯ ಸೊಸೈಟಿಯಿಂದ ಮನೆ ಮೇಲೆ ಸಾಲ ಮಾಡಿ ದಿಃ 29.06.2020 ರಲ್ಲಿ ಅವರ ಶ್ರೀಮತಿ ರವರ ಖಾತೆಗೆ ಹಣ ಹಾಕಿರುತ್ತೇನೆ. ನಂತರ ಸದರಿ ಚೆಕ್ಕನ್ನು ವಾಪಸ್ ನೀಡುವಂತೆ ಕೇಳಿರುತ್ತೇನೆ. ಅವರು ಇಂದು ನಾಳೆ ಎಂದು ಹೇಳುತ್ತಾ ಬಂದಿರುತ್ತಾರೆ. ನಂತರ ಅವರ ಮಗನಾದ ವೆಂಕಟೇಶ ರವರನ್ನು ನಾನು ಚೆಕ್ ವಿಚಾರ ಕೇಳಿರುತ್ತೇನೆ. ಆಗ ಅವರ ಮನೆ ಕೆಲಸ ನಡೆಯುತ್ತಿದ್ದರಿಂದ ಚೆಕ್ ಎಲ್ಲಿ ಇದೆ ಎಂದು ನೆನಪಿಲ್ಲ ಹುಡುಕಿ ಕೊಡುತ್ತೇವೆ ನನ್ನ ಮೇಲೆ ವಿಶ್ವಾಸ ಇಡು ಎಂದು ತಿಳಿಸಿರುತ್ತಾರೆ.
5. ನಂತರ ನನ್ನ ಹಾಗೂ ಅವರ ನಡುವೆ ಯಾವುದೇ ಹಣದ ವ್ಯವಹಾರ ಇರುವುದಿಲ್ಲ. ನಂತರ ಸಹ ಅವರು ನನಗೆ ಚೆಕ್ ವಾಪಸ್ ನೀಡಿರುವುದಿಲ್ಲ.
6. ನಂತರ ದಿಃ 26.08.2024 ರಂದು ನನಗೆ ನವನೀತ ಎಂಬುವವರರಿಂದ ಒಂದು ನೊಟೀಸು ಬಂದಿರುತ್ತದೆ. ಅದರಲ್ಲಿ ಅವರಿಂದ ನಾನು 15 ಲಕ್ಷ ಹಣ ಪಡೆದಿರುತ್ತೇನೆ ಎಂದು ನಮೂದಿಸಿದ್ದರು. ನನಗೆ ನವನೀತ ಎಂಬುವವರು ಪರಿಚಯ ಇರುವುದಿಲ್ಲ. ಸದರಿ ಚೆಕ್ ನಾನು ವೆಂಕಟೇಶ ರವರ

ತಾಯಿಗೆ ನೀಡಿದ ಚೆಕ್ ಆಗಿತ್ತು. ನನಗೆ ಹಾಗೂ ದೂರುದಾರರ ನಡುವೆ ಯಾವುದೇ ವ್ಯವಹಾರ ಇಲ್ಲ.

7. ನಂತರ ಆ ಬಗ್ಗೆ ನಾನು ದೂರುದಾರರು ಹಾಗೂ ವೆಂಕಟೇಶ ಮತ್ತು ಅವರ ತಾಯಿ ಮೇಲೆ ಸುರತ್ಕಲ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ. ಪೊಲೀಸ್ ಠಾಣೆಗೆ ನವನೀತ ರವರು ಬಂದಿರುವುದಿಲ್ಲ. ಆ ನಂತರ ಮಂಗಳೂರು ನ್ಯಾಯಾಲಯದಲ್ಲಿ ಒಂದು ಖಾಸಗಿ ದೂರು ದಾಖಲು ಮಾಡಿರುತ್ತೇನೆ.

8. ನಿಪಿ - 1 ರ ಮೇಲಿರುವ ಬರವಣಿಗೆ ನನ್ನದಲ್ಲ.

<u>ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.</u>

9. ಮಂಗಳೂರು ನ್ಯಾಯಾಲಯಕ್ಕೆ ಸಲ್ಲಿಸಿದ ಖಾಸಗಿ ದೂರಿನ ಪ್ರತಿಯನ್ನು ನಿಡಿ - 1 ಎಂದು,

10. ಪ್ರ.ವ.ವರದಿಯ ದೃಢೀಕೃತ ನಕಲನ್ನು ನಿಡಿ - 2 ಎಂದು,

11. ದಿಃ 04.12.2025 ರಂದು ಕೆನರಾ ಬ್ಯಾಂಕ್ ಸುತ್ಕಲ್ ಶಾಖೆಯವರಿಗೆ ನೀಡಿರುವ ಅರ್ಜಿಯನ್ನು ನಿಡಿ - 3 ಎಂದು,

12. ದಿಃ 05.12.2025 ರಂದು ಕೆನರಾ ಬ್ಯಾಂಕ್ ಸುತ್ಕಲ್ ಶಾಖೆಯವರು ನೀಡಿದ ಹಿಂಬರಹವನ್ನು ನಿಡಿ - 4 ಎಂದು,

13. ದಿಃ 01.06.2020 ರಿಂದ ದಿಃ 15.07.2020 ರ ವರೆಗಿನ ಬ್ಯಾಂಕ್ ಖಾತಾ ಸ್ಟೇಟ್ಮೆಂಟನ್ನು ನಿಡಿ - 5 ಎಂದು ಗುರುತಿಸಲಾಯಿತು. ನಿಡಿ - 5 ರಲ್ಲಿ ದಿಃ 29.06.2020 ರಂದು ಶ್ರೀಮತಿ ಸಿ., ರವರಿಗೆ 9 ಲಕ್ಷ ಹಣ ಸಂದಾಯವಾಗಿರುವ ನಮೂದನ್ನು ನಿಡಿ - **5**(ಎ) ಎಂದು ಗುರುತಿಸಲಾಯಿತು.

14. ನಾನು ದೂರುದಾರರಿಂದ ಯಾವುದೇ ಹಣ ಪಡೆದಿಲ್ಲ ಹಾಗೂ ಅವರಿಗೆ ಯಾವುದೇ ಚೆಕ್ಕನ್ನು ನೀಡಿಲ್ಲ. ಅವರು ನನಗೆ ಪರಿಚಯವೇ ಇರುವುದಿಲ್ಲ.

15. ದೂರುದಾರರು ಸುಳ್ಳು ದೂರು ನೀಡಿದ್ದು, ಸದರಿ ದೂರನ್ನು ವಜಾ ಮಾಡಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲುಃ ದೂರುದಾರರ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>

<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ